ಸೇರಿದ ಕುಟುಂಬದವರೇ ಆಗಿರುತ್ತಾರೆ. ಸಂತೆ ನಡೆಯುವಾಗ ಜೋರಾಗಿ ಕೂಗುತ್ತಾ ಜನರನ್ನು ಆಕರ್ಷಿಸುವುದು, ಎತ್ತರದಲ್ಲಿ ಕಟ್ಟಿದ ಹಗ್ಗ ಅಥವಾ ತಂತಿಯ ಮೇಲೆ ಪುಟಾಣಿ ಹುಡುಗಿಯೊಬ್ಬಳು ತಲೆಯಲ್ಲಿ ಸಣ್ಣ ಬಿಂದಿಗೆಯನ್ನೋ, ಲೋಟದಲ್ಲೋ ನೀರು ತುಂಬಿಕೊಂಡು ಹಗ್ಗದ ಮೇಲೆ ನಡೆಯುವುದು, ಚಮತ್ಕಾರಿ ಸೈಕಲ್ ಸವಾರಿ ಮಾಡುವುದು, ದೊಂಬರಾಟದವರ ಜೊತೆಯಲ್ಲಿ ಬಂದಿರುವ ಕಂತ್ರಿ ನಾಯಿಯನ್ನು ಬೆಂಕಿಯಿಂದ ಆವೃತ್ತವಾದ ಚಕ್ರದೊಳಗೆ ಬೆಂಕಿ ತಗುಲದಂತೆ ಎಗರಲು ಬಿಡುವುದು, ನೃತ್ಯ ಮಾಡುವುದು ಇವೇ ದೊಂಬರಾಟದ ಸಾಹಸಮಯ ದೃಶ್ಯಗಳಿರುತ್ತಿದ್ದವು. ಇತ್ತೀಚೆಗೆ ಇಂತಹ ಸಂಗತಿಗಳಿಗೆ ಮಕ್ಕಳನ್ನು ಬಳಸಬಾರದು ಎಂಬ ನಿಯಮದ ಜೊತೆಗೆ ಸಾಹಸ ನಿರ್ವಹಣೆಯಿಂದ ಜೀವಹಾನಿಯಾಗುತ್ತದೆ ಎಂಬ ಕಾರಣಕ್ಕೆ ದೊಂಬರಾಟವನ್ನು ಸರ್ಕಾರವೇ ನಿರ್ಬಂಧಿಸಿದೆ. ದೊಂಬರಾಟ ಮುಗಿದ ನಂತರ ಹುಡುಗನೊಬ್ಬ ತಟ್ಟೆ ಹಿಡಿದು, ನೆರೆದಿದ್ದ ಜನರ ಬಳಿ ಬಂದರೆ ಜನರು ತಮಗಿಷ್ಟ ಬಂದಷ್ಟು ಹಣವನ್ನು ನೀಡುವ ಪರಿಪಾಠವಿತ್ತು.

ಇನ್ನು ಬಲ ಕೈಯಲ್ಲಿ ಸಣ್ಣ ಡಮರುಗ ಹಿಡಿದು ಎಡಗೈಯಲ್ಲಿ ಹಗ್ಗವನ್ನೋ, ಕಬ್ಬಿಣದ ಚೈನ್ ಅನ್ನೋ ಹಿಡಿದು ಸಣ್ಣ ಫ್ರಾಕ್ ರೀತಿಯ ಬಟ್ಟೆ ತೊಟ್ಟಿರುವ ಮಂಗಗಳನ್ನು ಕುಣಿಸುವುದೊಂದು ಆಕರ್ಷಣೆ. 'ಲೋ ತಮ್ಮಾ ಕುಣಿಯೋ ಕುಣಿಯೋ' ಎಂದಾಗ ತಕ ಥೈ ತಕ ಥೈ ಎಂದು ಮಂಗ ಕುಣಿಯುತ್ತಾ, 'ಲೋ ತಮ್ಮಾ ನನ್ನ ತಲೆಗೂದಲಿನಲ್ಲಿರುವ ಹೇನು ನೋಡೋ' ಎಂದು ಕುಣಿಸುವವ ಆಜ್ಞಾಪಿಸಿದಾಗ ತಲೆಗೂದಲನ್ನು ಕೆದರಿಕೆದರಿ ಹೇನು ನೋಡಿ, ಸಿಕ್ಕ ಹೇನನ್ನು ತನ್ನ ಬಾಯೊಳಗೆ ಹಾಕುತ್ತಿತ್ತು. ನೆರೆದಿರುವ ಜನರಿಗೆ ಮನರಂಜನೆಯನ್ನು ನೀಡುವ ಮಂಗನಾಟವನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಮಾನವ ಎಂಥಾ ಚೇಷ್ಟೆಯ ಪ್ರಾಣಿಯನ್ನೂ ಅಥವಾ ಎಂಥಾ ಕ್ರೂರ ಪ್ರಾಣಿಯನ್ನೂ ಪಳಗಿಸಲು ನಿಸ್ಸೀಮ. ಸರ್ಕಸ್‌ಗಳಲ್ಲಿ, ಆನೆ, ಸಿಂಹಗಳಂತಹ ಪ್ರಾಣಿಗಳು ರಿಂಗ್ ಮಾಸ್ಟರ್ ಹೇಳಿದ್ದನ್ನು ಶಿರಸಾ ಪಾಲಿಸುವುದನ್ನು ನೋಡುತ್ತೇವಲ್ಲ...

'ಗ್ರೇಟ್ ಇಂಡಿಯನ್ ಮಾಂತ್ರಿಕ ಷೋ' ಅನ್ನು ನೀವು ನೋಡಿದ್ದೀರಾ. ನನ್ನ ಬಾಲ್ಯಕಾಲದಲ್ಲಿ ನಮ್ಮೂರಿನ ಸಂತೆಗೆ ಇದೇ ಮಾದರಿಯ ಮ್ಯಾಜಿಕ್ ಷೋ ಮಾಡುವ ವ್ಯಕ್ತಿಯು ಬರುತ್ತಿದ್ದ. ಮಾವಿನಹಣ್ಣಿನ ಗೊರಟೆಯಿಂದ ಕಣ್ಣು ಮುಚ್ಚಿ ತೆರೆಯುವುದರೊಳಗೆ ಸಣ್ಣದೊಂದು ಮಾವಿನ ಗಿಡವನ್ನೋ, ಮರವನ್ನೋ ಸೃಷ್ಟಿಸುವ ಈ ಮಾಯಾಜಾಲವನ್ನು ಅಲ್ಲಿ ಕಾಣಬಹುದಿತ್ತು. ಶೂನ್ಯದಿಂದ ಪಾರಿವಾಳದ ಸೃಷ್ಟಿ, ಬಾಯಿಯೊಳಗೆ ಕತ್ತಿಯನ್ನು ಇಳಿಸುವ ತಂತ್ರ ಎಲ್ಲವೂ ಜನಸಮುದಾಯವನ್ನು ನಿಬ್ಬೆರಗಾಗಿಸುತ್ತಿತ್ತು.

ಹಳದಿ ಪಂಚೆ ಸುತ್ತಿಕೊಂಡು, ಬರೀ ಮೈಗೆ ಕುಂಕುಮ, ಅರಿಶಿನ ಎರಚಿ, ಕೊರಳಿಗೆ ರುದ್ರಾಕ್ಷಿ ಹಾರ ತೊಟ್ಟು, ಎಣ್ಣೆ ತಗುಲಿಸದೇ ತಲೆಪೂರ್ತಿ ಜಡೆಜಡೆಯಾಗಿರುವ ಕೂದಲು ಬಿಟ್ಟುಕೊಂಡ, ತಲೆಯ ಮೇಲೆ ಬಿದಿರಿನ ಬುಟ್ಟಿಯಲ್ಲಿ ಮಾರಿಯಮ್ಮನ ಮುಖವರ್ಣಿಕೆ ಹೊತ್ತು ತನ್ನ ಬರೀ ಮೈಗೆ ಚಾವಟಿಯಿಂದ ನಿರಂತರವಾಗಿ ಹೊಡೆದುಕೊಳ್ಳುವಾಗ ಜೊತೆಯಲ್ಲಿರುವ ಸಹವರ್ತಿ ಡಮರುಗದಲ್ಲಿ ಶಬ್ದ ಮಾಡುತ್ತ ಆರಾಧನೆಯೊಂದನ್ನು ಪ್ರದರ್ಶಿಸುತ್ತಾ, ಕಾಣಿಕೆ ನೀಡಿದವರಿಗೆ ಕುಂಕುಮ ಪ್ರಸಾದ ಹಂಚುತ್ತಾ ಕುಣಿಯುತ್ತಾ ಸಾಗುವವರು ಇತ್ತೀಚಿನವರೆಗೂ ನಮ್ಮ ಸಂತೆ, ಜಾತ್ರೆಗಳಲ್ಲಿ ಇರುತ್ತಿದ್ದರು. ಈ ಆರಾಧನೆ ಯಾವ ಸಮುದಾಯದವರು ಮಾಡುತ್ತಾರೆ, ಈ ಆಚರಣೆಯ ಹಿಂದಿರುವ ಸಾಂಸ್ಕೃತಿಕ ಅಂಶಗಳಾವುವು ಎಂಬದು ಅಧ್ಯಯನ ಯೋಗ್ಯ.

ಅದೇ ರೀತಿ ನಾದಸ್ವರ ಮತ್ತು ವಾದ್ಯಗಳ ಜೊತೆಯಲ್ಲಿ ಬಸವನ ಜೊತೆಯಲ್ಲಿ ಬರುವ ಕೋಲೆ ಬಸವನ ತಂಡವನ್ನು ಕಂಡಿರಬಹುದು. ಕಚ್ಚೆ ಪಂಚೆ, ಪೇಟಾ, ಬಿಳಿಯ ವಸ್ತ್ರಧರಿಸಿ ಬರುವ ಈ ತಂಡದಲ್ಲಿ ಇಬ್ಬರೋ, ಮೂವರೋ ಇರುತ್ತಾರೆ. ಬಸವನ ಜೋಡಿಗಳ ದೇಹ ಮತ್ತು ಭುಜ ಎತ್ತರವಾಗಿ ಕಾಣುವಂತೆ ವಿವಿಧ ಬಣ್ಣದ ಮಿರಮಿರ ಮಿಂಚುವ ವಸ್ತ್ರಗಳಿಂದ, ಆಭರಣಗಳಿಂದ ಸಿಂಗರಿಸಲಾಗಿರುತ್ತದೆ. ಈ ಆಟದಲ್ಲಿ ರಾಮಸೀತೆಯರ ಕಲ್ಯಾಣ

